2)ಸೋರುವಿಕೆಯನ್ನು ತಡೆಗಟ್ಟಲು ವಾಹನ ತನಿಖೆಯನ್ನು ಚುರುಕುಗೊಳಿಸುವುದು.

3)ಪ್ರತಿ ಕಿ.ಮೀ.ಗೆ ತಗಲುವ ಇಂಧನ, ಟೈರುಗಳ ಬಳಕೆ, ವಾಹನ ಬಳಕೆ, ಚಾಲಕ ಮತ್ತು ನಿರ್ವಾಹಕರ ಬಳಕೆ ಮುಂತಾದ ಭೌತಿಕ ಕಾರ್ಯಚರಣೆಯಲ್ಲಿ ಸುಧಾರಣೆ.

4)ಬಡ್ತಿಯ ಮೇಲಿನ ಹೊಣೆಗಾರಿಕೆಯನ್ನು ಕಡಿಮೆಗೊಳಿಸಲು ಉಳಿಕೆ ಬಂಡವಾಳವನ್ನು ಈಕ್ವಿಟಿಯಾಗಿ ಪರಿವರ್ತಿಸಲು ಕೇಳಿಕೊಳ್ಳುವುದು.

6)ಬಳಕೆಗೆ ಅನುಗುಣವಾಗಿ ಸಾಮಗ್ರಿಗಳ ದಾಸ್ತಾನನ್ನು ಹೊಂದಿ ಸಾಮಗ್ರಿಗಳ ಶೇಖರಣೆಯ ಮೇಲೆ ನಿಗಾ ಇರಿಸುವಿಕೆ.

7)ಸಾಲಗಳ ಮೇಲೆ ಅವಲಂಬನೆಯನ್ನು ಕಡಿಮೆ ಮಾಡಿ ತನ್ಮೂಲಕ ಬಡ್ಡಿಯ ಹೊರೆಯನ್ನು ಕಡಿಮೆ ಮಾಡುವಿಕೆ.

ವಿಷಯ:- ಕೃಷಿ ಸಹಾಯಕರ ಹುದ್ದೆಗಳ ಖಾಲಿ ಇರುವುದರಿಂದ ರೈತರಿಗೆ ತೊಂದರೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 559 (1257)

ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್):- ಮಾನ್ಯ ಕೃಷಿ ಸಚಿವರು ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೃಷಿ ಸಹಾಯಕರ ಹುದ್ದೆಗಳು ಹೆಚ್ಚಿನ ಸಂಖ್ಯೆಗಳಲ್ಲಿ ಖಾಲಿ ಇರುವುದರಿಂದ ಕೃಷಿ ಇಲಾಖೆ ಮತ್ತು ರೈತನ ಮಧ್ಯೆ ಅಂತರ ಹೆಚ್ಚಿದ್ದು ಆ ರೈತನಿಗೆ ಸರ್ಕಾರದವರು ಸವಲತ್ತುಗಳ ಮಾಹಿತಿ ಮತ್ತು ಕೃಷಿ ಮತ್ತು ಕೃಷಿ ತಾಂತ್ರಿಕತೆಯ ಕೊರತೆ ಉಂಟಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಳ್ಳುವ ಕ್ರಮವೇನು?

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು):-

ಅ) ಹೌದು.

ಆ) ದಿನಾಂಕ : 31-5-95 ರ ಸರ್ಕಾರದ ಆದೇಶದ ಮೂಲಕ ಕೃಷಿ ಇಲಾಖೆಯನ್ನು ಪುನರ್ ರಚಿಸಲಾಗಿದೆ. ಇದರಿಂದಾಗಿ ಕೃಷಿ ಸಹಾಯಕರ ಮತ್ತು ಸಹಾಯಕ ಕೃಷಿ ಅಧಿಕಾರಿಗಳ ಕಾರ್ಯವ್ಯಾಪ್ತಿಗಳ ಕ್ಷೇತ್ರ ಕಡಿಮೆಯಾಗಿದೆ. ಈಗ ಕೃಷಿ ಸಹಾಯಕರ ಕಾರ್ಯವ್ಯಾಪ್ತಿ ಒಂದು ಗ್ರಾಮ ಪಂಚಾಯತ್ ಮಾತ್ರ. ಅಲ್ಲದೆ ಕೃಷಿ ಸಹಾಯಕರು ಗ್ರಾಮ ಪಂಚಾಯತ್ ಕಛೇರಿಯಲ್ಲಿಯೇ ತಮ್ಮ ಕಛೇರಿ ಸ್ಥಾಪಿಸಿಕೊಂಡು ಕಾರ್ಯ ನಿರ್ವಹಿಸಲು ಕ್ರಮ ಕೈಗೊಳ್ಳಲಾಗಿದೆ. ಬೆಳೆ ಸಂಗೋಪನೆ ಹಾಗೂ ಭೂಸಾರ ಸಂರಕ್ಷಣೆಗೆ ಸಂಬಂಧಿಸಿದ ಎಲ್ಲಾ ಕಾರ್ಯಗಳನ್ನು ಒಬ್ಬರೇ ಕೃಷಿ ಸಹಾಯಕರು ಕಾರ್ಯರೂಪಕ್ಕೆ

ತರುತ್ತಿದ್ದಾರೆ. ಆದ್ದರಿಂದ ಕೃಷಿ ಸಹಾಯಕರ ಸಂಪರ್ಕ ರೈತರೊಡನೆ ಹೆಚ್ಚಿರುತ್ತದೆ. ಜೊತೆಗೆ ಸುಧಾರಿತ ಕೃಷಿ ತಂತ್ರಜ್ಞಾನ, ಇಲಾಖೆಯ ವಿವಿಧ ಕಾರ್ಯಕ್ರಮ ಹಾಗೂ ನೀಡುವ ಸೌಲಭ್ಯಗಳನ್ನು ನಿದರ್ಶಿಸುವ ಮುದ್ರಿತ ತಗಡಿನ ಹಾಳೆ, ಗೋಡೆ ಬರಹ ಚಾರ್ಟ್ ಮುದ್ರಿತ ಹಸ್ತಪ್ರತಿ ಮುಂತಾದವುಗಳನ್ನು ಎಲ್ಲಾ ಗ್ರಾಮ ಪಂಚಾಯತ್‌ಗಳಿಗೆ ಸರಬರಾಜು ಮಾಡಲಾಗಿದ್ದು ಇವುಗಳ ಹೆಚ್ಚಿನ ಪರಿಣಾಮಕಾರಿ ಉಪಯೋಗದಿಂದಾಗಿ ಕೃಷಿ ಸಹಾಯಕರ ಖಾಲಿ ಹುದ್ದೆಗಳಿಂದ ಉಂಟಾದ ಕೊರತೆ ಬಹುಪಾಲು ತುಂಬಲಾಗಿದೆ. ಕೃಷಿ ಸಹಾಯಕರ ಹುದ್ದೆ ಖಾಲಿ ಇರುವ ಗ್ರಾಮ ಪಂಚಾಯತ್ ರೈತರು ಈಗ ಸಮೀಪದಲ್ಲಿಯೇ ಹೊಸದಾಗಿ ಪ್ರಾರಂಭಿಸಲಾಗಿರುವ ವಲಯ ಸಹಾಯಕ ಕೃಷಿ ಅಧಿಕಾರಿಗಳ ಕಛೇರಿಯನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.

ವಿಷಯ:- ರೈತರಿಗೆ ಉಚಿತವಾಗಿ ಸಸಿಗಳ ವಿತರಣೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 560 (1256)

ಶ್ರೀ ಎಸ್.ಪಿ.ಮುದ್ದ ಹನುಮೇಗೌಡ (ಕುಣಿಗಲ್):- ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಆಸಕ್ತಿಯಿರುವ ರೈತರಿಗೆ ಫಲ ನೀಡುವ ಸಸಿಗಳನ್ನು ಉಚಿತವಾಗಿ ವಿತರಣೆಗೆ ಸರ್ಕಾರದವರಲ್ಲಿ ಕಾರ್ಯ ಕ್ರಮವಿದೆಯೇ?

ಆ) ರೈತರು ತೋಟಗಾರಿಕೆಗೆ ಆಸಕ್ತಿ ವಹಿಸುವಂತೆ ಮಾಡಲು ಸರ್ಕಾರದವರು ಕೈಗೊಳ್ಳುತ್ತಿರುವ ಯೋಜನೆಗಳೇನು?

ಶ್ರೀ ಡಿ.ಟಿ.ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು):-

ಅ) ಇದೆ.

ಆ) ರಾಜ್ಯದ ರೈತರಲ್ಲಿ ತೋಟಗಾರಿಕೆ ಬಗ್ಗೆ ಆಸಕ್ತಿ ಮೂಡಿಸಲು ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯಮಟ್ಟದಲ್ಲಿ ತೋಟಗಾರಿಕೆ ಬೆಳೆಗಳ ಬಗ್ಗೆ ವಿಚಾರ ಸಂಕಿರಣ, ವಿಚಾರ ವಿನಿಮಯ, ಫಲಪುಷ್ಪ ಪ್ರದರ್ಶನ ಕ್ಷೇತ್ರೋತ್ಸವಗಳು ಇತ್ಯಾದಿಗಳನ್ನು ನಡೆಸಲಾಗುತ್ತಿದೆ. ಅಲ್ಲದೆ ರೈತರಿಗೆ ರೈತಮಹಿಳೆಯರಿಗೆ ಅಲ್ಪಾವಧಿಯ ತರಬೇತಿಯನ್ನು ಎಲ್ಲಾ ಜಿಲ್ಲೆಗಳಲ್ಲಿ ತೋಟಗಾರಿಕೆಗೆ ಸಂಬಂಧಿಸಿದ ವಿವಿದ ವಿಷಯಗಳ ಮೇಲೆ ನೀಡಲಾಗುತ್ತಿದೆ. ರೈತರ ಮಕ್ಕಳಿಗೆ ತೋಟಗಾರಿಕೆಯಲ್ಲಿ 10 ತಿಂಗಳ ತರಬೇತಿಯನ್ನು ಸಹ ನೀಡಲಾಗುತ್ತಿದೆ. ವಿವಿಧ 20 ತೋಟಗಾರಿಕೆ ಬೆಳೆಗಳ ಅತ್ಯುತ್ತಮ ತಾಕುಗಳ ರೈತರಿಗೆ ತೋಟಗಾರಿಗೆ ಪ್ರಶಸ್ತಿ ನೀಡುವ ಹೊಸ ಯೋಜನೆಯನ್ನು ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ. ತೋಟಗಾರಿಕೆ ಬೆಳೆಗಳನ್ನು ಬೆಳೆಸಲು ವಿವಿಧ ರೈತರಿಗೆ ನಬಾರ್ಡ್ ಪುರಸ್ಕೃತ ಸಾಲ ಸೌಲಭ್ಯಗಳನ್ನು ಏರ್ಪಡಿಸಲಾಗಿದೆ. ಎಲ್ಲಕ್ಕೂ ಮಿಗಿಲಾಗಿ ರಾಜ್ಯದಲ್ಲಿ ರೈತರ ಅನುಕೂಲಕ್ಕೋಸ್ಕರ 80 ಯೋಜನೆಗಳನ್ನು ರಾಜ್ಯ ವಲಯ ಮತ್ತು ಜಿಲ್ಲಾ ವಲಯದಲ್ಲಿ